ಸಾಕ್ಷಿಯ ಹೆಸರುಃ ರಾಮೇಗೌಡ

ದಿನಾಂಕಃ **06-03-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ.ಜಿ. ವಕೀಲರಿಂದಃ**

1) ದಿನಾಂಕಃ05.11.2020 ರಂದು ಪ್ರತಿವಾದಿಯರು ನನಗೆ ಬರೆದುಕೊಟ್ಟ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ನಿಪಿ-8 ಎಂದು ಗುರುತಿಸಲಾಯಿತು. (ಸದರಿ ದಾಖಲೆಗೆ ಸಂದಾಯ ಮಾಡಬೇಕಾದ ಸ್ಟಾಂಪ್ ಡ್ಯೂಟಿ ಮತ್ತು ಪೆನಾಲಿಟಿಯನ್ನು ಕಟ್ಟಲಾಗಿದೆ.)

2) ಸಾಕ್ಷಿ ನಿಪಿ 8 ರಲ್ಲಿರುವ ತಮ್ಮ ಹಾಗೂ ಪ್ರತಿವಾದಿಯರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ 8(ಎ) ಯಿಂದ 8(ಎಫ್) ಎಂದು ಗುರುತಿಸಲಾಯಿತು.

3) ಸದರಿ ಪತ್ರಕ್ಕೆ ರಾಮೇಗೌಡ ಬಿನ್ ಅಂದಾನಿಗೌಡ, ಸತೀಶ್ ಚಂದ್ರ ಮತ್ತು ಮಂಜುನಾಥ ಬಿನ್ ಸ್ವಾಮಿಗೌಡ ಎಂಬುವವರು ಸಾಕ್ಷಿಯಾಗಿ ಸಹಿಯನ್ನು ಹಾಕಿರುತ್ತಾರೆ. ರಾಮೇಗೌಡ ಬಿನ್ ಅಂದಾನಿಗೌಡ ಈಗ ಮೃಪಟ್ಟಿರುತ್ತಾರೆ. ಸಾಕ್ಷಿ ಸದರಿಯವರ ಸಹಿಗಳನ್ನು ನೋಡಿ ಗುರುತ್ತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 8(ಜಿ) ಯಿಂದ 8(ಐ) ಎಂದು ಗುರುತಿಸಲಾಯಿತು.

4) ಸದರಿ ಪತ್ರವನ್ನು ಎನ್.ನಗಾರಾಜು ಎಂಬ ಪತ್ರ ಬಹರಗಾರರು ಬರೆದಿರುತ್ತಾರೆ. ಸದರಿಯವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿ 8(ಜೆ) ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.